ಇ) ಜಾರಿ ಮತ್ತು ತನಿಖೆ ಹಾಗೂ ವಲಯ ಸಿಬ್ಬಂದಿಯವರಿಗೆ ನಿಯಮಿತವಾಗಿ ಅಬಕಾರಿ ದಾಳಿ ಹಾಗೂ ಗಸ್ತು ನಡೆಸಿ ಅಕ್ರಮಗಳು ಜರುಗದಂತೆ ಕಟ್ಟೆಚ್ಚರವಹಿಸಲು ಸೂಚಿಸಿದೆ ಹಾಗೂ ಅಕ್ರಮಗಳು ಕಂಡಬಂದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಸೂಚಿಸಿದೆ

759 (380) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಸುತ್ತಮುತ್ತ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಆಲೋಚನೆಯಲ್ಲಿದೆಯೇ ,

ಆ) ಹಾಗಿದ್ದಲ್ಲಿ, ಅಗತ್ಯವಿರುವಷ್ಟು ಭೂಮಿ ಲಭ್ಯವಿದೆಯೇ , ಹಾಗಿಲ್ಲದಿದ್ದಲ್ಲಿ, ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ , (ಗ್ರಾಮವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರ ನೀಡುವುದು) ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಅಗತ್ಯವಿರುವಷ್ಟು ಭೂಮಿ ಲಭ್ಯವಿಲ್ಲದಿರುವುದರಿಂದ ತುಮಕೂರು ಸಿರಾ ಮಧ್ಯೆ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಂತೆ ತುಮಕೂರು ತಾಲ್ಲೂಕು, ಕೋರ ಹೋಬಳಿ, ವಸಂತನರಸಾಪುರ, ಕೆಂಪನ ದೊಡ್ಡೇರಿ, ನಾಗೇನಹಳ್ಳಿ ಮತ್ತು ಬೆಳ್ಳಾವಿ ಹೋಬಳಿ ತಿಮ್ಮರಾಜನಹಳ್ಳಿ ಹಾಗೂ ಗಿರಿಯನ ಹಳ್ಳಿ ಗ್ರಾಮಗಳಲ್ಲಿ ಒಟ್ಟು ವಿಸ್ತೀರ್ಣ 788 ಎಕರೆ 33 ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ 1966ರ ಕಲಂ 28 (4)ರನ್ವಯ ಅಂತಿಮ ಅಧಿಸೂಚನೆ ಹೊರಡಿಸುವ ನಿಟ್ಟಿನಲ್ಲಿ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

(ಗ್ರಾಮವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

760 (885) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಪಿಂಚಣಿ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಆ) ಸ್ವಾತಂತ್ರ್ಯ ಹೋರಾಟಗಾರರು ಮೃತರಾದ ಸಂದರ್ಭದಲ್ಲಿ ಶವಸಂಸ್ಕಾರ ಮಾಡಲು ಮೃತರ ಕುಟುಂಬದವರಿಗೆ ಸರ್ಕಾರದ ವತಿಯಿಂದ ನೀಡುವ ಅನುದಾನವೆಷ್ಟು ,

ಇ) ಹಾಗಿದ್ದಲ್ಲಿ, ಶವಸಂಸ್ಕಾರಕ್ಕೆ ನೀಡಿದ ಅನುದಾನ ತುಮಕೂರು ಜಿಲ್ಲಾಧಿಕಾರಿಗಳಿಂದ ಈವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು , (ಪ್ರಕರಣವಾರು ಹಣದ ವಿವರ ನೀಡುವುದು) ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ರಾಜ್ಯಸರ್ಕಾರದ ಪಿಂಚಣಿ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ 11,411 ಜಿಲ್ಲಾವಾರು ವಿವರಗಳ ಅನುಬಂಧ ಲಗತ್ತಿಸಿದೆ

ಆ) ರೂ 1,000/-

ಇ) ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 81 ಪಿಎಫ್‌ಜಿ 2005, ದಿನಾಂಕ 20-12-2005ರಲ್ಲಿ ತುಮಕೂರು ಜಿಲ್ಲೆಯ ಮೃತ ಸ್ವಾತಂತ್ರ್ಯ ಹೋರಾಟಗಾರರ ಶವಸಂಸ್ಕಾರಕ್ಕೆ ರೂ 26,885/-ಗಳನ್ನು ಮಂಜೂರು ಮಾಡಲಾಗಿತ್ತು ತುಮಕೂರು ಜಿಲ್ಲೆ ಜಿಲ್ಲಾಧಿಕಾರಿಗಳು ಆದೇಶ ಸಂಖ್ಯೆ ಎಫ್‌ಎಫ್‌ಪಿ ಸಿ ಆರ್ 21/2005-06, ದಿನಾಂಕ 13-12-2006ರನ್ವಯ ಪ್ರತಿ ತಾಲ್ಲೂಕಿಗೆ ಕೆಳಕಂಡಂತೆ ಮರು ಹಂಚಿಕೆ ಮಾಡಿದ್ದಾರೆ

ಕ್ರ.ಸಂ	ತಾಲ್ಲೂಕಿನ ಹೆಸರು	ಮರುಹಂಚಿಕೆ ಮಾಡಿದ ಹಣ
01	ಗುಬ್ಬಿ	3,000-00
02	ಮಧುಗಿರಿ	4,000-00
03	ಶಿರಾ	2,000-00
04	ಕೊರಟಗೆರೆ	1,000-00
05	ತುರುವೇಕೆರೆ	1,000-00
06	ಚಿಕ್ಕನಾಯಕನಹಳ್ಳಿ	4,000-00
07	ತುಮಕೂರು	7,000-00
08	ಕುಣಿಗಲ್	2,000-00
09	ತಿಪಟೂರು	2,000-00
	ಒಟ್ಟು	**26,000-00**

ಮರು ಹಂಚಿಕೆ ಮಾಡಿರುವ ಮೇಲಿನ ಅನುದಾನವನ್ನು ತಾಂತ್ರಿಕ ಕಾರಣಗಳಿಂದ ಸಂಬಂಧಿಸಿದ ತಾಲ್ಲೂಕುಗಳಿಗೆ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ

ಅನುಬಂಧ

ರಾಜ್ಯ ಸರ್ಕಾರದ ಪಿಂಚಣಿ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರ ಜಿಲ್ಲಾವಾರು ವಿವರಗಳು

ಕ್ರ.ಸಂ	ಜಿಲ್ಲೆಯ/ಖಜಾನೆಯ ಹೆಸರು	ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ
01	ಬೆಂಗಳೂರು ನಗರ	5
02	ಬೆಂಗಳೂರು ಗ್ರಾಮಾಂತರ	240

1	2	3
03	ಬೆಳಗಾಂ	2879
04	ಬಳ್ಳಾರಿ	67
05	ಬೀದರ್	242
06	ಬಾಗಲಕೋಟೆ	184
07	ಬಿಜಾಪುರ	81
08	ಚಾಮರಾಜನಗರ	86
09	ಚಿತ್ರದುರ್ಗ	412
10	ಚಿಕ್ಕಮಗಳೂರು	138
11	ಕೊಡಗು	35
12	ದಾವಣಗೆರೆ	712
13	ಧಾರವಾಡ	445
14	ಹುಬ್ಬಳ್ಳಿ	225
15	ಗುಲ್ಬರ್ಗಾ	584
16	ಗದಗ್	178
17	ಹಾಸನ	267
18	ಹಾವೇರಿ	350
19	ಕೋಲಾರ	312
20	ಕೊಪ್ಪಳ	261
21	ಮಂಡ್ಯ	206
22	ಮೈಸೂರು	497
23	ಕಾರವಾರ	123
24	ರಾಯಚೂರು	69
25	ಶಿವಮೊಗ್ಗ	524
26	ಮಂಗಳೂರು	81
27	ತುಮಕೂರು	861
28	ಉಡುಪಿ	46
29	ಪಿಂಚಣಿ ಬಡವಾಡೆ ಖಜಾನೆ	1301
	ಒಟ್ಟು	**11411**

761 (886) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,